ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2018/2068

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 26/10/2018.

ಹಿಂಬರಹ

**ಕರ್ನಾಟಕ ಸರ್ಕಾರದ ನಡವಳಿಗಳು:** ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಸಿಆಸುಇ 73 ಎಸ್‌ಆರ್‌ಎಸ್ 2018 ಬೆಂಗಳೂರು ದಿನಾಂಕ:04/10/2018ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್ ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ ಜಂಟಿ ನಿರ್ದೇಶಕರು, [ಆಡಳಿತ], ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3) ಹಾಗೂ ರಿಜಿಸ್ಟ್ರಾರ್ [ಆಡಳಿತ], ಸಾರ್ವಜನಿಕ ಸಂಪರ್ಕಾಧಿಕಾರಿ
3. ನಿರ್ದೇಶಕರ ಆಪ್ತ ಶಾಖೆಗೆ
4. ಈ ನಿರ್ದೇಶನಾಲಯದ ಇ.ಎಸ್.ಟಿ.(1) ರಿಂದ (10) ವಿಭಾಗಕ್ಕೆ ಮಾಹಿತಿಗಾಗಿ
5. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

Sh-est(9) Endsmnt

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಬಿ.ಕೆ. ಪವಿತ್ರ ಮತ್ತಿತರರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ರಾಜ್ಯದ ಎಲ್ಲಾ ಇಲಾಖೆಯ ಎಲ್ಲಾ ವೃಂದದ ಪರಿಷ್ಕೃತ ಜೇಷ್ಠತಾ ಪಟ್ಟಿಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಮನವಿ/ಆಕ್ಷೇಪಣೆಗಳನ್ನು ಪರಿಶೀಲಿಸಿ ಇತ್ಯರ್ಥಪಡಿಸಲು ರಚಿಸಿರುವ ತಜ್ಞರ ಸಮಿತಿಗೆ ಸದಸ್ಯ ಕಾರ್ಯದರ್ಶಿಯನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಸೇನೀ 2011, ದಿನಾಂಕ:06.05.2017.
2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಎಸ್‌ಆರ್‌ಎಸ್ 2018 ದಿನಾಂಕ:08.08.2018.
3) ಸುತ್ತೋಲೆ ಸಂಖ್ಯೆ: ಸಿಆಸುಇ 73 ಎಸ್‌ಆರ್‌ಎಸ್ 2018 ದಿನಾಂಕ:05.09.2018.
4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಎಸ್‌ಆರ್‌ಎಸ್ 2018 ದಿನಾಂಕ:01.10.2018.

JD(Ad)/AO
BRT 97 A/GA/EST(9)

**ಪ್ರಸ್ತಾವನೆ :**

1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ ಬಿ.ಕೆ. ಪವಿತ್ರ ಮತ್ತಿತರರು ಪ್ರಕರಣದ ಸಿವಿಲ್ ಅಪೀಲು ಸಂಖ್ಯೆ: 2368/2011ರಲ್ಲಿ ದಿನಾಂಕ: 09.02.2017ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ:06.05.2017ರ ಸರ್ಕಾರದ ಆದೇಶದಲ್ಲಿ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ.

2. ಈಗಾಗಲೇ ಪ್ರಕಟಿಸಲಾದ ಜೇಷ್ಠತಾ ಪಟ್ಟಿಗಳಲ್ಲಿ ನ್ಯೂನ್ಯತೆಗಳು/ಲೋಪಗಳನ್ನು ಸರಿಪಡಿಸುವಂತೆ ಕೋರಿ ನೌಕರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಸಲಹೆ/ಅಭಿಪ್ರಾಯವನ್ನು ನೀಡಲು 4 ಸದಸ್ಯರನ್ನೊಳಗೊಂಡ ಸಮಾಲೋಚಕರ ಸಮಿತಿಯನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 08.08.2018ರ ಸರ್ಕಾರದ ಆದೇಶದನ್ವಯ ರಚಿಸಲಾಗಿದೆ.

3. ಸ್ವೀಕರಿಸಲಾದ ಆಕ್ಷೇಪಣೆಗಳಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸಮಾಲೋಚಕರ ಸಮಿತಿಯ ಮುಂದೆ ಮಂಡಿಸಲು ಅನುಸರಿಸಬೇಕಾದ ಕಾರ್ಯವಿಧಾನವನ್ನು ಮೇಲೆ(3)ರಲ್ಲಿ ಓದಲಾದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

4. ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಈಗಾಗಲೇ ರಚಿಸಲಾಗಿದ್ದ ಸಮಾಲೋಚಕರ ಸಮಿತಿಗೆ ಹೆಚ್ಚುವರಿ ಸದಸ್ಯರನ್ನು ನೇಮಿಸಲಾಗಿದೆ.

5. ಸಮಿತಿಯ ಸಭೆಗಳನ್ನು ವ್ಯವಸ್ಥಿತವಾಗಿ ನಡೆಸಲು ಅನುವಾಗಲು ಸಮಾಲೋಚಕರ ಸಮಿತಿಗೆ ಸದಸ್ಯ ಕಾರ್ಯದರ್ಶಿಯವರನ್ನು ನೇಮಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 73 ಎಸ್‌ಆರ್‌ಎಸ್ 2018, ಬೆಂಗಳೂರು, ದಿನಾಂಕ: 04.10.2018**

6. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೇಲೆ (2)ರಲ್ಲಿ ಓದಲಾದ ದಿನಾಂಕ: 08.08.2018ರ ಸರ್ಕಾರದ ಆದೇಶದನ್ವಯ ರಚಿಸಲಾದ ಸಮಿತಿಗೆ ಈ ಕೆಳಕಂಡವರನ್ನು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಯವರನ್ನಾಗಿ ಈ ಮೂಲಕ ನೇಮಿಸಲಾಗಿದೆ:

B-1335 23/10/18
23/10/18 @11:30am

Gayathri. M.R
4.10.18

—2

(1) **ಅಧ್ಯಕ್ಷರು:** ಸಂಬಂಧಪಟ್ಟ ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು.

(2) **ಸದಸ್ಯ ಕಾರ್ಯದರ್ಶಿ:** ಶ್ರೀ ಯು.ಚಂದ್ರ ನಾಯಕ್, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮತ್ತು ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇವರು.

7. **ಸಮಾಲೋಚನಾ ಸಮಿತಿಯ ಸಭೆಗಳನ್ನು ಸಂಬಂಧಪಟ್ಟ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಅವರ ಕೊಠಡಿಯಲ್ಲಿ ಅಥವಾ ಅವರು ನಿಗದಿಪಡಿಸುವ ಸ್ಥಳದಲ್ಲಿ ನಡೆಸುವುದು.**

8. ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸತಕ್ಕದ್ದು:

(1) ಸಂಬಂಧಪಟ್ಟ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಪೂರ್ವಾನುಮತಿ ಪಡೆದು ಸಮಿತಿಯ ಸಭೆಗಳನ್ನು ನಿಗದಿಪಡಿಸುವುದು.

(2) ಸಭಾ ಸೂಚನಾ ಪತ್ರವನ್ನು ಹೊರಡಿಸುವುದು ಮತ್ತು ಸಭಾ ನಡವಳಿಗಳನ್ನು ತಯಾರಿಸಿ ಅದಕ್ಕೆ ಸಮಿತಿಯ ಅಧ್ಯಕ್ಷರ ಮತ್ತು ಎಲ್ಲಾ ಸದಸ್ಯರ ಸಹಿಯನ್ನು ಪಡೆಯುವುದು.

(3) ಅನುಮೋದಿತ ನಡವಳಿಯ ಪ್ರತಿಗಳನ್ನು ಸಮಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಸಮಿತಿಯ ಪರಿಶೀಲನೆಗೆ ಒಳಪಟ್ಟ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಿದ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Gayathri. M.R
4/10/18

(ಗಾಯತ್ರಿ ಎಂ.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ-3(ಪ್ರ),
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಸೇವಾ ನಿಯಮಗಳು-ವಿಶೇಷ ಕೋಶ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸಲು ಕೋರಿದೆ.

**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (ಜೆ &ಎಸ್ಎಸ್ಎ) ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-1.
2) ಪ್ರಧಾನ ಮಹಾಲೇಖಪಾಲರು (ಇಆರ್&ಎಸ್ಎ) ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-1.
3) ಪ್ರಧಾನ ಮಹಾಲೇಖಪಾಲರು (ಎ& ಇ) ಮುಖ್ಯ ಕಟ್ಟಡ, ಬೆಂಗಳೂರು-01.
4) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿಯವರು.
5) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು.
6) ಎಲ್ಲಾ ಇಲಾಖಾ ಮುಖ್ಯಸ್ಥರು/ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.

--3

7) ಶ್ರೀ ಅಬ್ದುಲ್ ಖದೀರ್. ಸರ್ಕಾರದ ವಿಶೇಷ ಕಾರ್ಯದರ್ಶಿ(ನಿವೃತ್ತ). ಸಮಾಲೋಚಕರು. ಸಮಾಲೋಚಕರ ಸಮಿತಿ. ಕೊಠಡಿ ಸಂಖ್ಯೆ: 220. 2ನೇ ಮಹಡಿ. ವಿಕಾಸಸೌಧ. ಬೆಂಗಳೂರು-01.
8) ಶ್ರೀ ಎಂ.ಎಸ್. ಸ್ವಾಮಿ, ಸರ್ಕಾರದ ವಿಶೇಷ ಕಾರ್ಯದರ್ಶಿ( ನಿವೃತ್ತ). ಬೆಂಗಳೂರು
9) ಶ್ರೀ ಪಿ.ರಾಮನಾಥ್. ಸರ್ಕಾರದ ಉಪ ಕಾರ್ಯದರ್ಶಿ (ನಿವೃತ್ತ), ಪಣ್ಯಮ್. ನಂ:419. 8ನೇ ಕ್ರಾಸ್. 4ನೇ ಮೇನ್. 2ನೇ ಬ್ಲಾಕ್. ಆರ್‌ಟಿ ನಗರ. ಬೆಂಗಳೂರು 560 032
10) ಶ್ರೀ ದೇವರಾಜು. ಸರ್ಕಾರದ ಉಪ ಕಾರ್ಯದರ್ಶಿ (ನಿವೃತ್ತ). ನಂ:142. 19ನೇ ಜಿ ಕ್ರಾಸ್. 17ನೇ ಮೇನ್, 3ನೇ ಸೆಕ್ಟರ್. ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು 560 0102
11) ಶ್ರೀ ಚಿನ್ನಮಾರಯ್ಯ, ಉಪ ನಿರ್ದೇಶಕರು(ನಿವೃತ್ತ). ಸಮಾಜ ಕಲ್ಯಾಣ ಇಲಾಖೆ . ಬೆಂಗಳೂರು ಮ.ನಂ.39, 2ನೇ ಮೇನ್, ಆದಿತ್ಯ ನಗರ, ಜೆ.ಪಿ.ನಗರ. 8ನೇ ಫೇಸ್. ಬೆಂಗಳೂರು 62
12) ಶ್ರೀ ಯು.ಚಂದ್ರ ನಾಯಕ್. ಜಂಟಿ ನಿರ್ದೇಶಕರು. ಸಮಾಜ ಕಲ್ಯಾಣ ಇಲಾಖೆ ಮತ್ತು ಕಾರ್ಯದರ್ಶಿ. ಕೇಂದ್ರ ಪರಿಹಾರ ಸಮಿತಿ. ಮಾಗಡಿ ಮುಖ್ಯ ರಸ್ತೆ. ಸುಮ್ಮನಹಳ್ಳಿ. ಬೆಂಗಳೂರು-560 091
13) ಖಜಾನಾಧಿಕಾರಿ. ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
15) ಸರ್ಕಾರದ ಅಧೀನ ಕಾರ್ಯದರ್ಶಿ. ಸಿ.ಆ.ಸು.ಇ. (ಲೆಕ್ಕಪತ್ರ)
16) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.